**APRIL 26, 2024**

**ALL INDIA RADIO- DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ಇಂದು, ಮೊದಲ ಹಂತದ ಚುನಾವಣೆ; ಬೆಳಗ್ಗೆ 7 ಗಂಟೆಗೆ ಆರಂಭಗೊಂಡಿರುವ, ಮತದಾನ.**
- **ಮುಕ್ತ, ನಿರ್ಭೀತ, ಪಾರದರ್ಶಕ ಹಾಗೂ ನ್ಯಾಯ ಸಮ್ಮತ ಚುನಾವಣೆಗೆ, ವ್ಯಾಪಕ ಸುರಕ್ಷತಾ ಕ್ರಮ.**
- **ಮೇ 7, ರಾಜ್ಯದಲ್ಲಿ ಎರಡನೇ ಹಂತದ ಲೋಕಸಭೆ ಚುನಾವಣೆ; ಮನೆಯಿಂದಲೇ ಮತದಾನಕ್ಕೆ, ವ್ಯಾಪಕ ಸ್ಪಂದನೆ.**
- **ಮಲೇರಿಯಾ ಜಾಗ್ರತಿ ವಿಶ್ವ ದಿನದ ಅಂಗವಾಗಿ, ಜನ ಜಾಗ್ರತಿ.**

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ಇಂದು ಶುಕ್ರವಾರ, ಮೊದಲ ಹಂತದ ಚುನಾವಣೆಗೆ ಮತದಾನ, ಈ ಬೆಳಗ್ಗೆ 7 ಗಂಟೆಗೆ ಆರಂಭಗೊಂಡಿದೆ. ಸಂಜೆ 6 ಗಂಟೆಯ ವರೆಗೆ ಮುಂದುವರಿಯಲಿದೆ. ಮುಕ್ತ, ನಿರ್ಭೀತ, ಪಾರದರ್ಶಕ ಹಾಗೂ ನ್ಯಾಯ ಸಮ್ಮತ ಚುನಾವಣೆಗೆ 14 ಲೋಕಸಭಾ ಕ್ಷೇತ್ರ ವ್ಯಾಪ್ತಿಯ, 15 ಜಿಲ್ಲಾಡಳಿಗಳು, ವ್ಯಾಪಕ ಸಿದ್ಧತೆ ಮಾಡಿಕೊಂಡಿದ್ದು, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆಗಳಲ್ಲಿ ವ್ಯಾಪಕ ಭದ್ರತೆ ಕೈಗೊಳ್ಳಲಾಗಿದೆ. ಮೊದಲ ಹಂತದಲ್ಲಿ ಇಂದು, ಉಡುಪಿ–ಚಿಕ್ಕಮಗಳೂರು, ದಕ್ಷಿಣಕನ್ನಡ, ಹಾಸನ, ಮೈಸೂರು–ಕೊಡಗು, ಮಂಡ್ಯ, ಚಾಮರಾಜನಗರ, ತುಮಕೂರು, ಬೆಂಗಳೂರು ಕೇಂದ್ರ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಚಿತ್ರದುರ್ಗ ಈ ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ ಆರಂಭವಾಗಿದೆ.**

<><><>

ದಕ್ಷಿಣಕನ್ನಡ ಜಿಲ್ಲೆಯಾದ್ಯಂತ, ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ, 9 ವಿಶೇ ’ ಮಾದರಿ ಮತಗಟ್ಟೆಗಳನ್ನು ರೂಪಿಸಿ, ಮತದಾರರನ್ನು ವಿಶೇ ’ವಾಗಿ ಆಹ್ವಾನಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು ಸಾವಿರದ 8 ನೂರಾ 76 ಮತಗಟ್ಟೆಗಳಿದ್ದು, ಒಟ್ಟು 5 ವಿ ’ಯಗಳಲ್ಲಿ ಮತಗಟ್ಟೆಗಳನ್ನು ವಿಭಾಗಿಸಲಾಗಿದೆ ಎಂದು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಡಾಕ್ಟರ್ ಆನಂದ್ ಕೆ.

<><><>

ಡಾ. ಆನಂದ್ ಕೆ ಧ್ವನಿ 45 ಸೆಕೆಂದುಗಳು

<><><>

ಹಾಸನ ಲೋಕಸಭಾ ಕ್ಷೇತ್ರದಲ್ಲಿ, ಇಂದು ಬೆಳಗ್ಗೆ 7 ಗಂಟೆಗೆ ಮತದಾನ ಆರಂಭವಾಗಿದ್ದು, ಕಾಡಾನೆ ಹಾವಳಿ ಹಾಗೂ ಬಿರು ಬಿಸಿಲು ಹೆಚ್ಚಾಗಿರುವ, ಜಿಲ್ಲೆಯ ಮಲೆನಾಡು ಭಾಗದಲ್ಲಿ, ವ್ಯಾಪಕ ಮುಂಜಾಗ್ರತೆ ವಹಿಸಲಾಗಿದೆ ಎಂದು, ಜಿಲ್ಲಾ ಚುನಾವಣಾಧಿಕಾರಿ ಸಿ.ಸತ್ಯಭಾಮಾ ಆಕಾಶವಾಣಿಗೆ ತಿಳಿಸಿದ್ದಾರೆ.

<><><>

ಜಿಲ್ಲಾಧಿಕಾರಿ ಪಿ. ಸತ್ಯಭಾಮಾ ಧ್ವನಿ 40 ಸೆಕೆಂದುಗಳು

<><><>

ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ, ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ, ಅನ್ನದಾತ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ.

ಹನೂರು ವಿಧಾನಸಭಾ ಕ್ಷೇತ್ರದ ಲೊಕ್ಕನಹಳ್ಳಿ, ಚಿಕ್ಕಮಾಲಾಪುರ ಗ್ರಾಮಗಳು, ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದ ಹರಳೆ, ಹೊನ್ನೂರು ಗ್ರಾಮಗಳು, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಆಲೂರು, ಬಿಸಲವಾಡಿ ಹಾಗೂ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ನಿಟ್ರೆ, ಆಲತ್ತೂರು ಗ್ರಾಮದ ಕೆಲ ಮತಗಟ್ಟೆಗಳಲ್ಲಿ ರೈತರ ಮಹತ್ವವನ್ನು ಸಾರುವ, ಅನ್ನದಾತ ಮತಗಟ್ಟೆಗಳನ್ನು ತೆರೆಯಲಾಗಿದೆ.

<><><>

ರಾಜ್ಯದ ಲೋಕಸಭೆ ಚುನಾವಣೆಯ ಮೊದಲ ಹಂತಕ್ಕೆ, ಅಭ್ಯರ್ಥಿಗಳು ನಿನ್ನೆ ಮನೆ-ಮನೆ ಪ್ರಚಾರ ನಡೆಸಿ, ಮತದಾರರ ಮನವೊಲಿಕೆಗೆ ಅಂತಿಮ ಹಂತದ ಕಸರತ್ತು ನಡೆಸಿದರು. ಮತದಾನ, ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ, 8 ನಿಮಿಷಗಳ ಹಿಂದೆ ಆರಂಭವಾಗಿದೆ. ಒಟ್ಟು 30 ಸಾವಿರದ 602 ಮತಗಟ್ಟೆಗಳ ಪೈಕಿ, 19 ಸಾವಿರದ 701 ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ವ್ಯವಸ್ಥೆ ಮಾಡಲಾಗಿದೆ. ಮತಗಟ್ಟೆಯ ಪ್ರತಿಯೊಂದು ಕ್ಷಣದ ವಿಡಿಯೋವನ್ನು ಸಾರ್ವಜನಿಕರು ವೀಕ್ಷಿಸಬಹುದಾಗಿದೆ. ಸಾವಿರದ 370 ಬೂತ್‌ಗಳಲ್ಲಿ ಸಿ.ಸಿ.ಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಮೊದಲ ಹಂತದಲ್ಲಿ 50 ಸಾವಿರ ಪೊಲೀಸ್ ಪಡೆ, 7 ಪ್ಯಾರಾ ಮಿಲಿಟರಿ ಪಡೆ, 65 ಕೇಂದ್ರೀಯ ಮೀಸಲು ಪಡೆಗಳನ್ನು ಚುನಾವಣೆಗೆ ನಿಯೋಜಿಸಲಾಗಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಜ್ಯದಲ್ಲಿ ಎರಡನೇ ಹಂತದ ಲೋಕಸಭೆ ಚುನಾವಣೆ ಮೇ 7 ಮಂಗಳವಾರ ನಿಗದಿಯಾಗಿದ್ದು, ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ, 804 ಜನ ವಿಶೇಷಚೇತನರು, 85 ವರ್ಷ ಮೇಲ್ಪಟ್ಟ ಸಾವಿರದ ನಾಲ್ಕ ನೂರಾ 58 ಹಿರಿಯ

ನಾಗರಿಕರು ಮನೆಯಿಂದ ಮತದಾನಕ್ಕೆ ಹೆಸರು ನೊಂದಾಯಿಸಿದ್ದಾರೆ. ನಾಳೆ ಸಂಜೆ 6 ಗಂಟೆಯ ವರೆಗೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ.

<><><>

ಮೊದಲ ಹಂತದ ಮತದಾನಕ್ಕಾಗಿ, ಈ ವರೆಗೆ 14 ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ, ಗಾಲಿ ಖುರ್ಚಿಗಾಗಿ 756 ಜನ, ವಾಹನ ಸೌಕರ್ಯ ಕೋರಿ 489 ಜನ; ಹಾಗೂ ಸಹಾಯಕರನ್ನು ಕೋರಿ 31 ಜನ ವಿಶೇಷ ಚೇತನ ಮತದಾರರು ಈಗಾಗಲೇ ಸಕ್ಷಮ್ ಆಪ್‌ನಲ್ಲಿ ಬುಕ್ ಮಾಡಿದ್ದಾರೆ. ಇಂದು ಸಂಜೆ 5 ಗಂಟೆಯ ವರೆಗೆ ಸಹ ಬುಕ್ ಮಾಡಲು, ಚುನಾವಣಾ ಆಯೋಗ ಅವಕಾಶ ನೀಡಿದೆ.

<><><>

ರಾಜ್ಯದಲ್ಲಿ ಒಟ್ಟು 6 ಲಕ್ಷದ 20 ಸಾವಿರ ವಿಶೇಷ ಚೇತನ ಮತದಾರರಿದ್ದು, ಕರ್ನಾಟಕದ ಮೊದಲನೇ ಹಂತದ ಲೋಕಸಭೆ ಚುನಾವಣೆಯಲ್ಲಿ ಇಂದು, 2 ಲಕ್ಷದ 76 ಸಾವಿರದ 42 ಜನ ವಿಶೇಷ ಚೇತನ ಮತದಾರರು ಭಾಗವಹಿಸುತ್ತಿದ್ದಾರೆ ಎಂದು, ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ ತಿಳಿಸಿದ್ದಾರೆ.

<><><>

ಕೊಪ್ಪಳ ಲೋಕಸಭಾ ಕ್ಷೇತ್ರದ ಹಿರಿಯ ನಾಗರಿಕ ಹಾಗೂ ಮತದಾರ, ನಾರಾಯಣರಾವ್ ಹುದ್ದಾರ್, ಮನೆಯಿಂದಲೇ ಮತ ಚಲಾಯಿಸಿದ್ದು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ನಾರಾಯಣರಾವ್ ಹುದ್ದಾರ್ ಧ್ವನಿ 18 ಸೆಕೆಂದುಗಳು

<><><>

ಶಿವಮೊಗ್ಗ ನಗರದ ಶರಾವತಿ ನಗರ ನಿವಾಸಿ, 91 ವರ್ಷದ ಹಿರಿಯ ನಾಗರಿಕ, ಚಂದ್ರಶೇಖರಪ್ಪ, ಕೋಟೆ ರಸ್ತೆಯ 90 ವರ್ಷದ ಹಿರಿಯ ನಾಗರಿಕ, ಅನ್ನಪೂರ್ಣಮ್ಮ ಹಾಗೂ ಹೊಸಮನೆ ವ್ಯಾಪ್ತಿಯ ವಿಶೇಷಚೇತನ ಮತದಾರ ಹನುಮಂತರಾಯಪ್ಪ ಮನೆಯಿಂದಲೇ ಮತದಾನ ಮಾಡಿದರು.

<><><>

ಕಲಬುರಗಿ ಉತ್ತರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ, ನೆಹರು ಗಂಜ್ ಪ್ರದೇಶದ, ಗಾಂಧಿ ನಗರದ ನಿವಾಸಿ, ಶಾಂತಮ್ಮ ಮನೆಯಲ್ಲೇ ಮತ ಚಲಾಯಿಸಿದರು.

<><><>

ಯಾದಗಿರಿ ಜಿಲ್ಲೆಯಲ್ಲಿ 85 ವರ್ಷ ಮೇಲ್ಪಟ್ಟ 539 ಜನ ಹಾಗೂ 196 ಮಂದಿ ವಿಶೇಷಚೇತನರು, ಮನೆಯಿಂದ ಮತ ಚಲಾಯಿಸಲು, ಹೆಸರು ನೊಂದಾಯಿಸಿದ್ದಾರೆ.

<><><>

ಧಾರವಾಡದ ಕಮಲಾಪುರ ಕೋಟಿ ಓಣಿ ನಿವಾಸಿ, 101 ವರ್ಷದ ಶತಾಯುಷಿ ಶಂಕ್ರವ್ವ ಕಲಘಟಗಿ ತಮ್ಮ ಮತ ಚಲಾಯಿಸಿ, ಖುಷಿ ಪಟ್ಟರು.

<><><>

'ಮಲೇರಿಯಾ ವಿರುದ್ಧ ಹೋರಾಟದ ವೇಗ ವರ್ಧಿಸಿ, ಸಮಾನತೆಯ ಜಗತ್ತು ರೂಪಿಸುವುದು' ಎಂಬ ಧ್ಯೇಯದೊಂದಿಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಜ್ಯಾದ್ಯಂತ, ಮಲೇರಿಯಾ ಜಾಗ್ರತಿ ವಿಶ್ವ ದಿನವನ್ನು ಆಚರಿಸಿತು. ಪ್ರದೇಶ

ಸಮಾಚಾರಕ್ಕಾಗಿ ಈ ಕುರಿತು ಮಾಹಿತಿ ನೀಡಿದ್ದಾರೆ, ಧಾರವಾಡದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೀಟಶಾಸ್ತ್ರಜ್ಞ ಟಿ.ಪಿ. ಮಂಜುನಾಥ.

<><><>

ಕೀಟಶಾಸ್ತ್ರಜ್ಞ ಟಿ.ಪಿ. ಮಂಜುನಾಥ ಧ್ವನಿ 50 ಸೆಕೆಂದುಗಳು

<><><>

ಹವಾಮಾನ ಇಲಾಖೆ ಮುನ್ಸೂಚನೆಯಂತೆ ಕರಾವಳಿ ಭಾಗದ ಜಿಲ್ಲೆಗಳಲ್ಲಿ ಇಂದೂ ಕೂಡ, 2 ಡಿಗ್ರಿಗಳಷ್ಟು ಬಿಸಿಲಿನ ಝಳ ಹೆಚ್ಚಿರುವುದರಿಂದ, ಬಿಸಿ ಗಾಳಿ ಜನರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ. ಉತ್ತರಕನ್ನಡ ಜಿಲ್ಲೆ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧ್ಯಕ್ಷೆ, ಗಂಗೂಬಾಯಿ ಮಾನಕರ ಅವರು, ತುರ್ತು ಪರಿಸ್ಥಿತಿಯಲ್ಲಿ ಉಚಿತ ಸಹಾಯವಾಣಿ 1-0-7-7 ಅಥವಾ 94835 11015ಕ್ಕೆ ಕರೆ ಮಾಡುವಂತೆ, ಕೋರಿದ್ದಾರೆ. ಮಧ್ಯಾಹ್ನ 12 ಗಂಟೆಯಿಂದ ಸಂಜೆ 4 ಗಂಟೆಯ ವರೆಗೆ ಮನೆ ಇಂದ ಆಚೆ ಬರದೇ, ನಿರ್ಜಲೀಕರಣಕ್ಕೆ ಒಳಗಾಗದೇ, ಆರೋಗ್ಯ ಕಾಪಾಡಿಕೊಳ್ಳುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

<><><>

ಕಲಬುರಗಿ ಜಿಲ್ಲೆಯ, 11 ತಾಲೂಕುಗಳಲ್ಲಿ, 385 ಗ್ರಾಮಗಳು ಕುಡಿಯುವ ನೀರಿನ ಕೊರತೆ ಎದುರಿಸುವ ಸಾಧ್ಯತೆ ಇದೆ ಎಂದು, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಭವರ್‌ಸಿಂಗ್ ಮೀನಾ ತಿಳಿಸಿದ್ದಾರೆ. ಜಿಲ್ಲೆಯಲ್ಲಿ 313 ಖಾಸಗಿ ಕೊಳವೆ ಬಾವಿಗಳನ್ನು ಜಿಲ್ಲಾಡಳಿತ ಗುರುತಿಸಿದೆ. ಕುಡಿಯುವ ನೀರಿನ ಸಮಸ್ಯೆ ಎದುರಿಸುತ್ತಿರುವ ಹಳ್ಳಿಗಳಿಗೆ, ನೀರು ಸರಬರಾಜು ಮಾಡಲು, ಜಿಲ್ಲಾಡಳಿತವು 33 ಟ್ಯಾಂಕರಗಳಿಗಾಗಿ ಟೆಂಡರ್ ಕರೆದಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ಇಂದು, ಮೊದಲ ಹಂತದ ಚುನಾವಣೆ: ಬೆಳಗ್ಗೆ 7 ಗಂಟೆಗೆ ಆರಂಭಗೊಂಡಿರುವ, ಮತದಾನ.
- ಮುಕ್ತ, ನಿರ್ಭೀತ, ಪಾರದರ್ಶಕ ಹಾಗೂ ನ್ಯಾಯ ಸಮ್ಮತ ಚುನಾವಣೆಗೆ, ವ್ಯಾಪಕ ಸುರಕ್ಷತಾ ವ್ಯವಸ್ಥೆ.
- ಮೇ 7, ರಾಜ್ಯದಲ್ಲಿ ಎರಡನೇ ಹಂತದ ಲೋಕಸಭೆ ಚುನಾವಣೆ: ಮನೆಯಿಂದಲೇ ಮತದಾನಕ್ಕೆ, ವ್ಯಾಪಕ ಸ್ಪಂದನೆ.
- ಮಲೇರಿಯಾ ಜಾಗ್ರತಿ ವಿಶ್ವ ದಿನದ ಅಂಗವಾಗಿ, ಜನ ಜಾಗ್ರತಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>